## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1102 |
| 2 | ಸದಸ್ಯರ ಹೆಸರು | : | ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 25-07-2024 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ನಡೆಯುತ್ತಿರುವ "ಬಾಗಿಲಿಗೆ ಬಂತು ಸರ್ಕಾರ" ಕಾರ್ಯಕ್ರಮದ ಉದ್ದೇಶವೇನು; ಈವರೆವಿಗೆ ಎಷ್ಟು ವಿಧಾನಸಭಾ ಕ್ಷೇತ್ರಗಳಲ್ಲಿ ಕಾರ್ಯಕ್ರಮ ನಡೆದಿದೆ; | ಕ್ಷೇತ್ರ ವ್ಯಾಪ್ತಿಯಲ್ಲಿಯೇ ಸಾರ್ವಜನಿಕರನ್ನು ನೇರವಾಗಿ ಭೇಟಿ ಮಾಡಿ ಅವರ ಕುಂದುಕೊರತೆ / ಅಹವಾಲುಗಳನ್ನು ಬಗೆಹರಿಸುವುದು "ಬಾಗಿಲಿಗೆ ಬಂತು ಸರ್ಕಾರ" ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿರುತ್ತದೆ.<br><br>ವಲಯವಾರು ವಿವರ **ಅನುಬಂಧ-1** ರಲ್ಲಿ ಒದಗಿಸಿದೆ. |
| ಆ) | ಈ ಕಾರ್ಯಕ್ರಮ / ಸಭೆಗಳಲ್ಲಿ ಬಂದಿರುವ ಮನವಿ ದೂರುಗಳೆಷ್ಟು; (ಪ್ರತಿ ಕಾರ್ಯಕ್ರಮದ ವಿವರ ಒದಗಿಸುವುದು) | |
| ಇ) | ಸದರಿ ದೂರುಗಳ ಪೈಕಿ ಇತ್ಯರ್ಥಗೊಂಡಿರುವ ದೂರುಗಳೆಷ್ಟು; ಇತ್ಯರ್ಥಗೊಳ್ಳಲು ಬಾಕಿ ಇರುವ ದೂರುಗಳನ್ನು ಕಾಲಮಿತಿಯಲ್ಲಿ ಇತ್ಯರ್ಥಪಡಿಸುವುದರ ಜೊತೆಗೆ ರಾಜಕಾಲುವೆ ಒತ್ತುವರಿ ಮತ್ತು ಸ್ಮಶಾನಕ್ಕೆ ಜಾಗದ ಅವಶ್ಯಕತೆ ಕುರಿತು ಬಂದಿರುವ ದೂರುಗಳ ಮೇಲೆ ಕೈಗೊಂಡಿರುವ ಕ್ರಮಗಳೇನು; | ಸದರಿ ದೂರುಗಳ ಪೈಕಿ 7866 ಸಂಖ್ಯೆಯ ದೂರುಗಳು / ಅಹವಾಲುಗಳನ್ನು ದಿನಾಂಕ:18-07-2024ರ ಅಂತ್ಯಕ್ಕೆ ಪರಿಹರಿಸಲಾಗಿರುತ್ತದೆ.<br><br>"ಬಾಗಿಲಿಗೆ ಬಂತು ಸರ್ಕಾರ" ಕಾರ್ಯಕ್ರಮದಲ್ಲಿ ಪಾಲಿಕೆಯ ಬೃಹತ್ ಮಳೆನೀರುಗಾಲುವೆಗೆ ಸಂಬಂಧಿಸಿದಂತೆ, ಮೇಲ್ಕಂಡ 14 ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಐ.ಪಿ.ಜಿ.ಆರ್.ಎಸ್ ತಂತ್ರಾಶದ ಮೂಲಕ ಸ್ವೀಕೃತವಾಗಿರುವ ಒಟ್ಟಾರೆ 110 ಮನವಿ/ದೂರುಗಳ ಪೈಕಿ 107 ಮನವಿ / ದೂರುಗಳನ್ನು ಇತ್ಯರ್ಥ ಪಡಿಸಲಾಗಿರುತ್ತದೆ. ಒಟ್ಟಾರೆ 110 ಮನವಿ/ದೂರುಗಳ ಪೈಕಿ 27 ಮನವಿ/ದೂರುಗಳು ರಾಜಕಾಲುವೆ ಒತ್ತುವರಿಯ ಕುರಿತು ಸ್ವೀಕೃತವಾಗಿರುತ್ತದೆ.<br><br>ಪ್ರಸ್ತುತ ಒತ್ತುವರಿಗಳ ಗುರುತಿಸುವಿಕೆ ಮತ್ತು ತೆರವು ಕಾರ್ಯಚರಣೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸರ್ಕಾರವು ಇತ್ತೀಚೆಗೆ ಆದೇಶ ಸಂಖ್ಯೆ: ನಅಇ 250 ಎಂಎನ್‌ವೈ 2018(ಭಾಗ-3), ದಿನಾಂಕ:28-08-2023ರಂತೆ ಪ್ರತಿಯೊಬ್ಬ ಅಧಿಕಾರಿಯನ್ನು/ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರ/ಅಧಿಕೃತಗೊಳಿಸಿದ ಅಧಿಕಾರಿಯನ್ನಾಗಿ (Designated officer) ನಿಯೋಜಿಸಿ ಅವರುಗಳ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿಗಧಿಪಡಿಸಿ ಒತ್ತುವರಿಗಳನ್ನು ತೆರವುಗೊಳಿಸಲು ಕ್ರಮವಹಿಸಿರುತ್ತದೆ. ಅದರಂತೆ "ಬಾಗಿಲಿಗೆ ಬಂತು ಸರ್ಕಾರ" ಕಾರ್ಯಕ್ರಮದಲ್ಲಿ ರಾಜಕಾಲುವೆ ಒತ್ತುವರಿಯ ಕುರಿತು ಸ್ವೀಕೃತವಾಗಿರುವ ದೂರುಗಳನ್ನು ಸಹ ಇತ್ಯರ್ಥಪಡಿಸಲು ಅದರಂತೆ ಕ್ರಮವಹಿಸಲಾಗಿದೆ. |

| | | |
|---|---|---|
| ಈ) | ಕಾರ್ಯಕ್ರಮಗಳಲ್ಲಿ ಹೆಚ್ಚಾಗಿ ಕೇಳಿ ಬಂದಿರುವ ದೂರುಗಳು ಯಾವುವು; ಸದರಿ ದೂರುಗಳು ಪುನರಾವರ್ತನೆ ಆಗದಂತೆ ನೋಡಿಕೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ರಾಜೀವ್ ಗಾಂಧಿ ನಿವೇಶನ ಯೋಜನೆಯಡಿ ಅಲ್ಲಿ ನಿವೇಶನ ಮತ್ತು ಮನೆಗಾಗಿ ದೂರುಗಳು, ಸೇವಾ ವಿಷಯಗಳು, ಅನುದಾನ ಬಿಡುಗಡೆ ಕುರಿತು, ಯೋಜನೆ ಮತ್ತು ಕಾರ್ಯಕ್ರಮ ಕುರಿತು, ನಾಗರೀಕ ಸೌಲಭ್ಯಗಳ ಕುರಿತು ಹೆಚ್ಚು ದೂರುಗಳು ಸ್ವೀಕೃತವಾಗಿದ್ದು ಸದರಿ ದೂರುಗಳು ಪುನರಾವರ್ತನೆಯಾಗದಂತೆ ನಿಯಮಾನುಸಾರ ಕ್ರಮ ಕೈಗೊಳ್ಳಲಾಗಿದೆ. |

ನಅಇ 380 ಎಂಎನ್‌ವೈ 2024

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ

# ಅನುಬಂಧ-1

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಡೆದ ಜನತಾದರ್ಶನ ಕಾರ್ಯಕ್ರಮಗಳ ವಿವರ

| ಕ್ರ. ಸಂ | ಜನತಾದರ್ಶನ ನಡೆದ ದಿನಾಂಕ | ಜನತಾದರ್ಶನ ಕಾರ್ಯಕ್ರಮ ನಡೆದ ವಲಯ | ಸ್ವೀಕರಿಸಲಾದ ಒಟ್ಟು ದೂರು / ಅಹವಾಲುಗಳ ಸಂಖ್ಯೆ |
|---|---|---|---|
| 1 | 2 | 3 | 4 |
| 1 | 03-01-2024 | ಮಹದೇವಪುರ | 1969 |
| 2 | 05-01-2024 | ಯಲಹಂಕ & ದಾಸರಹಳ್ಳಿ | 1781 |
| 3 | 06-01-2024 | ಪೂರ್ವ | 1056 |
| 4 | 11-01-2024 | ಬೊಮ್ಮನಹಳ್ಳಿ | 2370 |
| 5 | 16-01-2024 | ಪಶ್ಚಿಮ | 1252 |
| 6 | 18-02-2024 | ರಾಜರಾಜೇಶ್ವರಿ ನಗರ | 1669 |
| | | ಒಟ್ಟು ದೂರು /ಅಹವಾಲುಗಳ ಸಂಖ್ಯೆ: | 10097 |

19/03/24

ಉಪ ಮುಖ್ಯ ಮಾಹಿತಿ ತಂತ್ರಜ್ಞಾನ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ